ಮಂಗಳೂರಿನ ಸರ್ಕಾರಿ ವೆನ್‌ಲಾಕ್ ಆಸ್ಪತ್ರೆಯ ಬಗ್ಗೆ

1164 - ಶ್ರೀ ಎಸ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರಿನ ಸರ್ಕಾರಿ ವೆನ್‌ಲಾಕ್ ಆಸ್ಪತ್ರೆಯಲ್ಲಿ ಕಳೆದ ಎರಡು ವರ್ಷಗಳಿಂದ ಬೇಡಿಕೆ ಇರುವ 2 ಆಟೋಕ್ಲೇವ್ ಹೈ ಪ್ರಶರ್ ಮಾಡಲು ಶಸ್ತ್ರಕ್ರಿಯೆ ನಿಲ್ಲದಂತೆ ಮಾಡಲು ಸರ್ಕಾರವು ಆಲೋಚಿಸಿದೆಯೆ?

ಆ) ಖಾಲಿ ಇರುವ ಕ್ಷ-ಕಿರಣ ತಂತ್ರಜ್ಞರನ್ನು ನೇಮಕಾತಿ ಮಾಡಲು ಸರ್ಕಾರಕ್ಕಿರುವ ತೊಂದರೆ ಏನು?

ಇ) ಖಾಲಿ ಇರುವ 'ಡಿ' ದರ್ಜೆ ಹಾಗೂ ಡ್ರೈವರ್ ನರ್ಸ್‌ಗಳು ಹಾಗೂ ಇತರೇ ಸಿಬ್ಬಂದಿಗಳ ನೇಮಕಾತಿ ಎಂದು ಮಾಡಲಾಗುವುದು.

ಈ) ತಕ್ಷಣ ಉದರ ದರ್ಶಕ ಯಂತ್ರ ದುರಸ್ತಿಗೊಳಿಸಲು ಕ್ರಮ ಕೈಗೊಳ್ಳಲಾಗುವುದೇ?

ಉ) ರೋಗಿಗಳನ್ನು ಮೇಲಿನ ಮಹಡಿಯಲ್ಲಿ ಕೊಂಡೊಯ್ಯಲು ಬೇಕಾದ ಲಿಫ್ಟ್ ಹಲವು ವರ್ಷಗಳಿಂದ ಹಾಳಾಗಿದ್ದು ತಕ್ಷಣ ದುರಸ್ತಿ ಮಾಡಿಸಲು ಅಥವಾ ಹೊಸ ಲಿಫ್ಟ್ ಅಳವಡಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಖಾಸಗಿ ವೈದ್ಯಕೀಯ ಕಾಲೇಜು ಮಂಗಳೂರು ಇವರಿಂದ ಚಿಕಿತ್ಸಾ ಸೌಲಭ್ಯದ ಶುಲ್ಕದ ರೂಪದಲ್ಲಿ ವಸೂಲು ಮಾಡಿರುವ ಹಣದಿಂದ ಖರೀದಿ ನಿಯಮದಂತೆ 2 ಆಟೋಕ್ಲೇವ್ ಹೈ ಪ್ರಶರ್ ಸ್ಟೆರಿಲೈಸರ್‌ನ್ನು ಖರೀದಿಸಲಾಗುತ್ತದೆ. ಈಗ ಹಾಲಿ ಇರುವ ಸ್ಟೆರಿಲೈಸರ್‌ನ್ನು ಸಹ ದುರಸ್ಥಿಗೊಳಿಸಿ ಉಪಯೋಗಿಸಲಾಗುವುದು.

ಆ) ಸರ್ಕಾರ ಮೀಸಲಾತಿ ಬಗ್ಗೆ ಆದೇಶ ಹೊರಡಿಸಿದ ನಂತರ ಹುದ್ದೆಗಳನ್ನು ತುಂಬಲು ಕ್ರಮ ತೆಗೆದುಕೊಳ್ಳಲಾಗುವುದು.

ಇ) ಪ್ರಶ್ನೆ (ಅ) ಗೆ ಉತ್ತರಿಸಿದಂತೆ

ಈ) ಚಿಕಿತ್ಸಾ ಸೌಲಭ್ಯದ ಶುಲ್ಕದ ರೂಪದಲ್ಲಿ ದೊರೆಯುವ ಹಣವನ್ನು ಲೆಪ್ರೊಸ್ಕೋಪಿಕ್ ಯಂತ್ರದ ತಕ್ಷಣ ದುರಸ್ಥಿಗೆ ಉಪಯೋಗಿಸಿಕೊಳ್ಳಲಾಗುವುದು.

ಉ) ಹಾಲಿ ಇರುವ ಲಿಫ್ಟ್‌ನ್ನು ತಕ್ಷಣ ದುರಸ್ಥಿಗೊಳಿಸಿ ಉಪಯೋಗಿಸಲು ಕ್ರಮ ಕೈಗೊಳ್ಳಲಾಗುವುದು.

ಹುಬ್ಬಳ್ಳಿಯ ವೈದ್ಯಕೀಯ ಕಾಲೇಜನ್ನು ಸ್ವಾಯುಕ್ತ ಸಂಸ್ಥೆಯನ್ನಾಗಿ ಪರಿವರ್ತನೆ ಮಾಡುವ ಬಗ್ಗೆ

907 - ಶ್ರೀ ಬಿ.ಆರ್. ಯಾವಗಲ್ (ನರಗುಂದಾ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿಯಲ್ಲಿ ಕರ್ನಾಟಕ ವೈದ್ಯಕೀಯ ಕಾಲೇಜನ್ನು ಸ್ವಾಯುತ್ತ ಸಂಸ್ಥೆಯಾಗಿ ಪರಿವರ್ತಿಸುವ ವಿಚಾರ ಸರ್ಕಾರಕ್ಕಿದೆಯೇ?

ಆ) ಹಾಗಿದ್ದಲ್ಲಿ ಎಂದು ವಹಿಸಿಕೊಡಲಾಗುವುದು

ಶ್ರೀ ಎ.ಬಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ಹೌದು

ಆ) ಸ್ವಾಯತ್ತ ಸಂಸ್ಥೆಯನ್ನಾಗಿ ಈಗಾಗಲೇ ಪರಿಗಣಿಸಿ ಆದೇಶ ಹೊರಡಿಸಲಾಗಿದೆ. ಸದರಿ ಕಾಲೇಜಿನ ಪ್ರಾಂಶುಪಾಲರನ್ನು ಪ್ರಭಾರ ನಿರ್ದೇಶಕರನ್ನಾಗಿ ಸರ್ಕಾರ ನೇಮಿಸಿದೆ.

ಈ ಸಂಸ್ಥೆಯ ಆಡಳಿತ ಮಂಡಳಿಯ ಸಭೆಯನ್ನು ಕರೆಯಲಾಗಿದ್ದು ಅದರಲ್ಲಿ ತೆಗೆದುಕೊಳ್ಳುವ ನಿರ್ಣಯನ್ನಾಗಿ ಕಾರ್ಯಗತಗೊಳಿಸಲಾಗುವುದು.

ಮಲೆನಾಡು ಅಭಿವೃದ್ಧಿ ಮಂಡಲಿ ಕುರಿತು

828 - ಶ್ರೀ ಆಯನೂರು ಮಂಜುನಾಥ (ಹೊಸನಗರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಲೆನಾಡು ಅಭಿವೃದ್ಧಿ ಮಂಡಳಿಯ ವ್ಯಾಪ್ತಿಗೆ ಸೇರಿಸಿರುವ ಬಯಲು ಸೀಮೆಯ ತಾಲ್ಲೂಕುಗಳು ಯಾವುವು? ಹಾಗೂ ಯಾವ ಉದ್ದೇಶದಿಂದ ಸೇರಿಸಲಾಗಿದೆ.

ಆ) ಅಭಿವೃದ್ಧಿಗೆ ಹಣವನ್ನು ಕ್ಷೇತ್ರಾವಾರು ನೀಡುವ ಬದಲಾಗಿ ಕ್ಷೇತ್ರದ ವಿಸ್ತಾರ ಅಲ್ಲಿಯ ಮಲೆನಾಡು ಭಾಗದ ಸ್ಥಿತಿಗಳಿಗೆ ಅನುಗುಣವಾಗಿ ವಿತರಿಸಲು ಸರ್ಕಾರದವರು ಪರಿಶೀಲಿಸುವರೇ:

ಇ) ಈ ಮಂಡಳಿಯ ವ್ಯಾಪ್ತಿಗೆ ಸೇರಿದ ಬಯಲು ಸೀಮೆ ತಾಲ್ಲೂಕುಗಳನ್ನು ತೆಗೆದು ಹಾಕಲು ಸರ್ಕಾರದವರು ಪರಿಶೀಲಿಸುವರೆ?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಾಗೂ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಸಚಿವರು) :

ಅ) ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯು 1991ನೇ ಅಧಿನಿಯಮಕ್ಕೆ ಅನುಬಂಧಿಸಲಾದ ಅನುಸೂಚಿಯಲ್ಲಿ ಮಲೆನಾಡು ಪ್ರದೇಶವನ್ನು ನಿಗದಿಪಡಿಸಿದೆ. ಈ ಅನೂಸೂಚಿಯಲ್ಲಿ ಮಲೆನಾಡು ಪ್ರದೇಶಕ್ಕೆ ಸೇರಿಸಲಾದ ತಾಲ್ಲೂಕುಗಳನ್ನು ತೋರಿಸಿದೆ. ಈ ಅಧಿನಿಯಮವು ಯಾವುದೇ ತಾಲ್ಲೂಕನ್ನು ಬಯಲುಸೀಮೆ ತಾಲ್ಲೂಕ್ಕೆಂದು ವಿಂಗಡಿಸಿಲ್ಲ.

ಆ) ಜಿಲ್ಲೆ ಮತ್ತು ತಾಲ್ಲೂಕುಗಳನ್ನು ಘಟಕ ಮತ್ತು ಉಪ ಘಟಕ ಎಂದು ಪರಿಗಣಿಸಿ ಕ್ರಿಯಾ ಯೋಜನೆಯನ್ನು ತಯಾರಿಸಲು ಮಾರ್ಗ ಸೂಚಿಯನ್ನು ಹೊರಡಿಸಲಾಗಿದೆ.

ಇ) (ಅ)ಕ್ಕೆ ನೀಡಿದ ಉತ್ತರದ ಪ್ರಕಾರ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಅರಣ್ಯ ಇಲಾಖೆ ಅಧಿಕಾರಿಗಳ ದೌರ್ಜನ್ಯ ಕುರಿತು

829 - ಶ್ರೀ ಆಯನೂರು ಮಂಜುನಾಥ (ಹೊಸನಗರ) : ಮಾನ್ಯ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ತಾಲ್ಲೂಕಿನ ವೀರಣ್ಣನ ಭೆಳವಳ್ಳಿ ಹತ್ತಿರ ದಿನಾಂಕ: 25-12-94ರಂದು ಅರಣ್ಯ ಇಲಾಖೆಯವರು ರಾತ್ರಿ 8-30ಕ್ಕೆ ಅಂಬಾಸಿಡರ್ ಕಾರ್ ನಂ. ಕೆಎ-14-ಎಂ-4715 ಧಾಳಿ ನಡೆಸಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಧಾಳಿಯ ಫಲಿತಾಂಶವೇನು?

ಇ) ಇಲಾಖೆಯವರು ಹಾರಿಸಿದ ಗುಂಡಿನಿಂದ ಉಂಟಾದ ಹಾನಿ ಏನು?

ಈ) ಘಟನೆಯ ಬಗ್ಗೆ ತನಿಖೆ ಮಾಡಿ ವರದಿ ಸಲ್ಲಿಸಲು ಸರ್ಕಾರದವರು ಆದೇಶ ನೀಡಿದ್ದಾರೆಯೇ?

ಉ) ತನಿಖೆ ನಡೆದಿದ್ದಲ್ಲಿ, ತಪ್ಪಿತಸ್ಥರ ಮೇಲೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) :

ಅ) ಬಂದಿದೆ